

ಒಬ್ಬ ರಾಜ ತನ್ನ ಮಂತ್ರಿಯತ್ರ ಹೇಳುತ್ತಾನೆ ಮಂತ್ರಿವರ್ಯನೇ ಇಷ್ಟೆಲ್ಲಾ ಸುಖ ಸೌಕರ್ಯಗಳೆಲ್ಲಾ ಇದ್ದರೂ , ಮಹಾರಾಜನಾದ ನನಗೆ ನೆಮ್ಮದಿಯೇ ಇಲ್ಲವಲ್ಲಾ? ಅಗೋ ಅಲ್ಲಿ ನೋಡು ಆ ನನ್ನ ಸೇವಕ ಒಂದಿಷ್ಟು ಪುಡಿಗಾಸು ಸಂಬಳದ ಕೆಲಸ ಮಾಡುತ್ತಿದ್ದರೂ ಎಷ್ಟೊಂದು ಸಂತೋಷದಿಂದ ಇದ್ದಾನೆ!! ಇದಕ್ಕೆ ಕಾರಣವೇನು?

ಮಂತ್ರಿ - 99 ರ ಪರೀಕ್ಷೆ ನಡೆಸಿದರೆ ಖಂಡಿತವಾಗಿಯೂ ತಮ್ಮ ಪ್ರಶ್ನೆಗೆ ಉತ್ತರ ಸಿಗುವುದು ರಾಜರೇ

ರಾಜ - 99 ರ ಪರೀಕ್ಷೆ? ಅದು ಹೇಗೆ?

ಮಂತ್ರಿ - 99 ಬೆಳ್ಳಿಯ ನಾಣ್ಯಗಳನ್ನು ಒಂದು ಚೀಲದಲ್ಲಿ ತುಂಬಿದ ನಂತರ, ಅದರೊಳಗೆ ಒಂದು ಚೀಟಿಯಲ್ಲಿ ಈ 100 ಬೆಳ್ಳಿಯ ನಾಣ್ಯಗಳು ನಿನಗಾಗಿಯೇ ಅಂತ ಬರೆದು ಆತನ ಮನೆಯ ಬಾಗಿಲಲ್ಲಿ ಇಡಬೇಕು. ಆ ಸಂತೋಷದ ಬಗ್ಗೆ ತಮಗೆ ಅರ್ಥವಾಗುವುದು.

ರಾಜನು ಮಂತ್ರಿಯು ಹೇಳಿದ ಹಾಗೆ ನಾಣ್ಯಗಳು ತುಂಬಿದ ಚೀಲವನ್ನು ಸೇವಕನ ಮನೆಬಾಗಿಲಲ್ಲಿ ಇಡುತ್ತಾನೆ.

ರಾತ್ರಿ ಸೇವಕ ಮನೆಯ ಹೊರಗೆ ಬಂದಾಗ ಆ ಚೀಲವನ್ನು ನೋಡಿದ.ರಾಜನ ಬಹುಮಾನ ಅಂತ ತಿಳಿದು ಸಂತೋಷಪಟ್ಟ. ಅದೂ100 ನಾಣ್ಯಗಳು.!!! ಆತ ನಾಣ್ಯಗಳನ್ನು ಎಣಿಸಿ ನೋಡಿದ. ಆದರೆ 99 ನಾಣ್ಯಗಳು ಮಾತ್ರ..! ಆತ ಹತ್ತಾರು ಬಾರಿ ಎಣಿಸಿ ನೋಡಿದ. ಚೀಟಿಯಲ್ಲಿ 100 ನಾಣ್ಯಗಳು ಇವೆ ಅಂತ ಬರೆದಿದೆಯಲ್ಲವೇ? ಅತ ಯೋಚಿಸಿದ, ಅತ ಮನೆಯ ಒಳಗೆ ಹೊರಗೆ ಎಲ್ಲಾ ಕಡೆ ಹುಡುಕಾಡಿದ. ಪತ್ನಿ ಮಕ್ಕಳತ್ರವಿಚಾರಿಸಿದ. ಆ ಒಂದು ನಾಣ್ಯ ಸಿಗಲೇ ಇಲ್ಲ.

ಕಾಣೆಯಾದ ಆ ಒಂದು ನಾಣ್ಯವನ್ನು ನೆನೆದು ನೆನೆದು ಆತನಿಗೆ ರಾತ್ರಿಯಿಡೀ ನಿದ್ದೆನೇ ಬರಲಿಲ್ಲ. ಜೀವನದಲ್ಲಿ ಮೊದಲ ಬಾರಿ ನಿದ್ರಿಸದ ರಾತ್ರಿ.

ಮರುದಿನ ದುಃಖಿತನಾದ ಆತ ರಾಜ ಭವನಕ್ಕೆ ಬಂದ.

ರಾಜ ಆತನ ಹತ್ತಿರ ಕೇಳುತ್ತಾನೆ - ನಿನಗೆ ಇದೇನಾಯಿತು? ತುಂಬಾ ದುಃಖಿತನಾಗಿರುವಿ ಮತ್ತು ಬಳಲಿದ್ದಿಯಲ್ಲಾ?

ಆತ – ಪ್ರಭು, ತಾವು ಕೊಟ್ಟ 100 ನಾಣ್ಯಗಳಲ್ಲಿ ಒಂದು ನಾಣ್ಯ ಕಾಣೆಯಾಗಿದೆ. ಅದರ ಬಗ್ಗೆ ನೆನೆದು ದುಃಖಿತನಾದೆ.
ಆಗ ರಾಜನಿಗೆ ಸಂತೋಷದ ಗುಟ್ಟು ಅರ್ಥವಾಯಿತು. ರಾಜ ಮನಸಲ್ಲೇ ಅಂದುಕೊಂಡ ತನ್ನ ಅವಸ್ಥೆ ಕೂಡಾ ಇದುವೇ.
ಸಿಗದ ಒಂದನ್ನು ನೆನೆದು ದುಃಖಿಸುತ್ತೇವೆ. ಕೈಯಲ್ಲಿ ಇರುವ 99 ರಲ್ಲಿ ಸಂತೋಷಪಡುವುದನ್ನು ಮತ್ತು ದೇವರಿಗೆ ಧನ್ಯವಾದಗಳನ್ನು ಹೇಳಲು ಮರೆಯುತ್ತೇವೆ ಅತಿಯಾಸೆಯಿಂದಾಗಿ ಎಲ್ಲರೂ ದುಃಖಿತಸ್ತರಾಗುವರು. ಹಾಗೂ ಈ ಅಕ್ಕಪಕ್ಕದ ಜನ ಇಲ್ಲದಿರುವುದರ ಬಗ್ಗೆ ನೆನಪಿಸಿ ಇರುವುದರಲ್ಲೇ ತೃಪ್ತಿಯಾಗಿರುವ ಜನರನ್ನು ದುಃಖದಲ್ಲಿ ಮುಳುಗಿಸುವ ವ್ಯರ್ಥ ಪ್ರಯತ್ನ ಮಾಡುವರು.